ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 30.09.2023.

**ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು: ಎದುರುದಾರ ಪರ ವಕೀಲರಿಂದ:**

ಎದುರುದಾರಳು ನನಗೆ ಅಷ್ಟೇನು ಗೊತ್ತಿಲ್ಲಾ, ಅದರೆ ಅವರ ಗಂಡ ಕೈಲಾಸ ನನಗೆ ಗೊತ್ತು. ನನಗೆ ಮೂರು ಸರ್ವೆ ನಂಬರಗಳಲ್ಲಿ 25 ಎಕರೆ ಜಮೀನು ಇರುತ್ತದೆ. ಸದರಿ ಮೂರು ಸರ್ವೆ ನಂಬರಗಳು ಕೂಡಿ ನನಗೆ 34 ಎಕರೆ ಜಮೀನು ಇದೆ ಎಂದರೆ ಸರಿ. ಅದೇ ರೀತಿ ಹಿರೋಳಿ ಗ್ರಾಮದಲ್ಲಿ ನನಗೆ 2 ಮನೆಗಳು ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಅಣ್ಣ-ತಮ್ಮಂದಿರದ್ದು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಮನೆಗಳು ನನ್ನ ಅಣ್ಣ-ತಮ್ಮಂದಿರಿಗೆ ಸಂಬಂಧಪಟ್ಟಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರಳು ನನ್ನ ವಿರುದ್ಧ ಹಾಕಿದ ಒಎಸ್.ನಂ.77/2021 ರಲ್ಲಿ ನೋಟೀಸ್ ನನಗೆ ಮುಟ್ಟಿರುತ್ತದೆ ಎಂದರೆ ಸರಿ. ತದನಂತರ ನನಗೆ ಗೊತ್ತಾಗಿರುತ್ತದೆ. ತದನಂತರ ನಾನು ಶ್ರೀ ಎಸ್.ಎ. ಪಾಟೀಲ್ ವಕೀಲರನ್ನು ನನ್ನ ಪರವಾಗಿ ಆ ಕೇಸಿನಲ್ಲಿ ನೇಮಿಸಿಕೊಂಡಿರುತ್ತೇನೆ

ಎಂದರೆ ಸರಿ. ಸದರಿ ಕೇಸಿನಲ್ಲಿ ಸಾಕಷ್ಟು ಕಾಲಾವಕಾಶ ಕೊಟ್ಟರು ಕೂಡಾ ನಾನು ತಕರಾರು ಸಲ್ಲಿಸಿಲ್ಲಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತರೆ. ಸದರಿ ಕೇಸಿನಲ್ಲಿ ನಾನು ದಾವಾ ಸ್ವತ್ತುಗಳನ್ನು ಮಾರಾಟ ಮಾಡಬಾರದು ಎಂದು ಕೂಡಾ ಆದೇಶವಾಗಿತ್ತು ಎಂದರೆ ನನಗೆ ಗೊತ್ತಿಲ್ಲಾ. ಶ್ರೀ ಎಸ್.ಎ. ಪಾಟೀಲ್ ವಕೀಲರು ಫೋನ್ ನಂಬರ ನನ್ನ ಹತ್ತಿರ ಇರುವುದಿಲ್ಲ.

ನನ್ನ ಮಗಳಾದ ಚಂದ್ರಕಲಾ ಆಳಂದದಲ್ಲಿ ಇರುತ್ತಾಳೆ ಎಂದರೆ ಸರಿ. ನಾನು ಹಿರೋಳಿ ಗ್ರಾಮದಿಂದ ವಾರಕ್ಕೆ ಒಮ್ಮೆ, 15 ದಿನಕ್ಕೆ ಒಮ್ಮೆ, ಆಳಂದಗೆ ಬಂದು ಹೋಗುತ್ತೇನೆ ಎಂದರೆ ಸರಿ. ಮೇಲೆ ಹೇಳಿದ ಒಎಸ್.ನಂ.77/2021 ಪ್ರಕರಣ ಚಾಲ್ತಿಯಲ್ಲಿರುವಾಗ, ನನ್ನ ಮಗಳ ಚಂದ್ರಕಾಲ ಕಡೆಯಿಂದ ಕೆಳ ನ್ಯಾಯಾಲಯದಲ್ಲಿ ಒಎಸ್.ನಂ.65/2022 ದಾವೆ ಹಾಕಿರುತ್ತೇವೆ ಎಂದರೆ ಸರಿ. ಸದರಿ ಕೇಸಿನಲ್ಲಿ ನಾನು ಮತ್ತು ನನ್ನ ಮಗಳು, ನನ್ನ ಇನ್ನೊಬ್ಬ ಮಗಳ ಗುಂಡಮ್ಮ ಕೂಡಿಕೊಂಡು ಅಪಸಾತ ರಾಜಿಯಾಗಿರುತ್ತೇವೆ ಎಂದರೆ ಸರಿ. ನನಗೆ ಕೆಳ ನ್ಯಾಯಾಲಯದಿಂದ ಯಾವುದೇ ನೋಟೀಸ್ ಬಂದಿರಲಿಲ್ಲ.

ನನಗೆ ಸಂಬಂಧಪಟ್ಟ 34 ಎಕರೆ ಜಮೀನಿನಲ್ಲಿ ನನಗೂ ಒಂದು ಭಾಗ ಬರುತ್ತದೆ ಎಂದರೆ ಸರಿ. ಸದರಿ ನನ್ನ ಮಗಳು ಹಾಕಿದ ಕೇಸಿನಲ್ಲಿ ನನಗೂ ಒಂದು ಭಾಗ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಒಎಸ್.ನಂ.77/2021 ರಲ್ಲಿ ಉದ್ದೇಶ ಪೂರ್ವಕವಾಗಿ ನನ್ನ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲಾ. ನನಗೆ ಪಾರ್ಶ್ವವಾಯು ಕಾಯಿಲೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಕಾಯಿಲೆಯಿಂದ

ಅನಾರೋಗ್ಯವಾಗಿದ್ದು, ಹಾಸಿಗೆ ಹಿಡಿದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿ ಮನ್ನಾ ಮಾಡಲು ಯಾವುದೇ ಸಕಾರಣಗಳನ್ನು ತೋರಿಸಿಲ್ಲಾ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**